ದಿನಾಂಕಃ **07-01-2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ 5 ರವರಿಂದ,**

1) ಮರಳಿ ಸುಬ್ಬಯ್ಯ ಎಂಬುವವರು ನಮ್ಮ ವಂಶದವರು. ನನ್ನ ತಂದೆ ಯಾವಾಗ ತೀರಿಕೊಂಡರು ಎಂದು ನನಗೆ ಗೊತ್ತಿಲ್ಲ. ನನ್ನ ತಾಯಿ ಸುಮಾರು ಐದಾರು ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. ನನ್ನ ತಾಯಿ ನನ್ನ ತಂದೆಗೆ ಸೇರಿದ ಆಸ್ತಿಗಳನ್ನು ಮಾರಾಟ ಮಾಡಿರುವುದಿಲ್ಲ. ನನ್ನ ತಾಯಿ ಮಾದಯ್ಯ ಶೆಟ್ಟಿ ರವರಿಗೆ ಒಂದು ಆಸ್ತಿಯನ್ನು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಾಯಿ ಮಾಡಿರುವ ಕ್ರಯ ಪತ್ರಕ್ಕೆ ನಾನು ಸಾಕ್ಷಿದಾರನಾಗಿರುವುದಿಲ್ಲ. ದಾವಾ ಸ್ವತ್ತುಗಳ ಮೇಲೆ ನನ್ನ ತಂದೆ ಸಾಲವನ್ನು ಪಡೆದಕೊಂಡಿರುವುದಿಲ್ಲ. ನನ್ನ ತಾಯಿ ಕ್ರಯ ಪತ್ರ ಮಾಡುವ ಕಾಲಕ್ಕೆ ತನ್ನ ಇಬ್ಬರು ಮಕ್ಕಳ ಮದುವೆಯ ಖರ್ಚಿಗೆ ಮಾಡಿದ ಸಾಲಗಳನ್ನು ತೀರಿಸುವ ಸಲುವಾಗಿ ಮಾರಾಟ ಮಾಡಿರುತ್ತೇನೆ ಎಂದು ನಮೂದಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

2) ನನ್ನ ತಂದೆ ತೀರಿಕೊಂಡ ನಂತರ ಮನೆಯ ಯಜಮಾನಿಕೆಯನ್ನು ಯಾರು ನೋಡಿಕೊಳ್ಳುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ನನ್ನ ತಾಯಿ ಮಾಡಿರುವ ಕ್ರಯ ಪತ್ರಕ್ಕೆ 2 ನೇ ಪ್ರತಿವಾದಿ ಸಹಿ ಹಾಕಿರುವ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ತಂದೆ ಜೀವಂತ ಅವಧಿಯಲ್ಲಿ ನನ್ನ ತಂದೆ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ಹಣ ನೀಡಿರುವುದಿಲ್ಲ.

**ಮುಂದುವರೆದ ಪಾಟೀ ಸವಾಲು ವಿಚಾರಣೆಗೆ ಸಮಯ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ